ಆಯವ್ಯಯದ ಗುರಿಗಿಂತ ಹೆಚ್ಚಿನ ಮೊತ್ತ ಸಂಗ್ರಹವಾಗಿ ವರ್ಗಾವಣೆ ಯಾಗಿದೆ. ನಿಗಧಿತ ಗುರಿಗಿಂತ ಹೆಚ್ಚುವರಿಯಾಗಿ ವರ್ಗಾವಣೆಗೊಂಡ ಮೊತ್ತವನ್ನು ವೆಚ್ಚವೆಂದು ಪರಿಗಣಿಸಿರುವುದರಿಂದ ಹೆಚ್ಚಿನ ವೆಚ್ಚವೆಂದು ಕಂಡು ಬರುತ್ತದೆ.

ಆ) ರಾಜ್ಯದಲ್ಲಿ ಅರಣ್ಯೀಕರಣಕ್ಕಾಗಿ ಕಳೆದ ಮೂರು ವರ್ಷಗಳಿಂದ ಖರ್ಚು ಮಡಿದ ಹಣದ ವಿವರ ಹಾಗೂ ನೆಟ್ಟ ಸಸಿಗಳ ವಿವರ ಈ ಕೆಳಕಂಡಂತಿವೆ.

ವರ್ಷ	ಖರ್ಚು ಮಾಡಿದ ಹಣ (ರೂ. ಲಕ್ಷಗಳಲ್ಲಿ)	ನೆಟ್ಟ ಸಸಿಗಳು (ಲಕ್ಷಗಳಲ್ಲಿ)
2003–04	5572.00	143.452
2004–05	8774.120	263.854
2005–06	9428.756	316.423

"ಸ್ಟೆಮ್" ಎಂಬ ಸಂಸ್ಥೆಯವರಿಂದ ಮೌಲ್ಯಮಾಪನ ಮಾಡಲಾಗಿದ್ದು ಜೆ.ಬಿ.ಐ.ಸಿ. ಯೋಜನೆಯಡಿ ಬದುಕುಳಿದ ಸಸಿಗಳ ಶೇಕಡವಾರು ಪ್ರಮಾಣ 78.6 ಆಗಿರುತ್ತದೆ.

18 (81) ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ರಾಜ್ಯ ಸರ್ಕಾರಿ ನೌಕರರ 5ನೇ ವೇತನ ಆಯೋಗದ ವರದಿ ಸರ್ಕಾರಕ್ಕೆ ಒಪ್ಪಿಸಲಾಗಿದೆಯೇ ;

ಆ) ಹಾಗಿದ್ದಲ್ಲಿ, ಇದು ಯಾವಾಗಿನಿಂದ ಜಾರಿಗೆ ಬರುತ್ತದೆ ;

ಇ) ಕೇಂದ್ರ ಸರ್ಕಾರದವರು ಈಗಾಗಲೇ 6ನೇ ವೇತನ ಆಯೋಗವನ್ನೂ ಸಹ ರಚನೆಯಾದರೂ, ರಾಜ್ಯದಲ್ಲಿ ಇನ್ನೂ 5ನೇ ವೇತನ ಆಯೋಗ ತನ್ನ ಪೂರ್ಣ ಪ್ರಮಾಣದ ವರದಿಯನ್ನು ನೀಡದೆ ವಿಳಂಬ ಧೋರಣೆ ಅನುಸರಿಸಲು ಕಾರಣವೇನು ;

ಈ) ಇದರಿಂದ ನೌಕರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ) ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 11 ಎಸ್‌ಆರ್‌ಪಿ 2003 ದಿನಾಂಕ 21ನೇ ಜೂನ್ 2005ರಲ್ಲಿ ರಾಜ್ಯ ಸರ್ಕಾರಿ ನೌಕರರ ವೇತನ ಶ್ರೇಣಿಗಳನ್ನು ಪರಿಷ್ಕರಿಸಲು ಶ್ರೀ ಸಿ. ಗೋಪಾಲರೆಡ್ಡಿ, ನಿವೃತ್ತ ಕೇಂದ್ರ ಸರ್ಕಾರದ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ಏಕ ಸದಸ್ಯ 5ನೇ ರಾಜ್ಯ ವೇತನ ಆಯೋಗವನ್ನು ರಚಿಸಲಾಯ್ತು. ತದನಂತರ, ಶ್ರೀ ಸಿ. ಗೋಪಾಲರೆಡ್ಡಿ ಇವರು ನಿಧನರಾದ ಪ್ರಯುಕ್ತ ಶ್ರೀ ಎಂ.ಬಿ. ಪ್ರಕಾಶ್, ನಿವೃತ್ತ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರಕಾರ ಇವರನ್ನು ಏಕಸದಸ್ಯ 5ನೇ ರಾಜ್ಯ ವೇತನ ಆಯೋಗದ ಅಧ್ಯಕ್ಷರನ್ನಾಗಿ ದಿನಾಂಕ 3ನೇ ಆಗಸ್ಟ್ 2006ರ ಆದೇಶದಲ್ಲಿ ನೇಮಿಸಿ, ಆಯೋಗದ ವರದಿಯನ್ನು ದಿನಾಂಕ 31ನೇ ಡಿಸೆಂಬರ್ 2006ರೊಳಗೆ ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಯ್ತು, ವೇತನ ಆಯೋಗದ ಅಧ್ಯಕ್ಷರನ್ನು ಹೊಸದಾಗಿ ನೇಮಕ ಮಾಡಲಾದ ಹಿನ್ನೆಲೆಯಲ್ಲಿ, ಸರ್ಕಾರಿ ನೌಕರರ ಬೇಡಿಕೆಗಳನ್ನು ಪರಿಶೀಲಿಸಿ, ಅಂತಿಮ ವರದಿಯನ್ನು ಸಲ್ಲಿಸಲು ಇನ್ನಷ್ಟು ಕಾಲಾವಕಾಶ ನೀಡುವಂತೆ ಆಯೋಗವು ಕೋರಿದ್ದರ ಮೇರೆಗೆ, ದಿನಾಂಕ 20ನೇ ಡಿಸೆಂಬರ್ 2006ರ ಆದೇಶದಲ್ಲಿ ಆಯೋಗವು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಮತ್ತು ಆಯೋಗದ ಇತರೆ ಕಾರ್ಯಕಲಾಪಗಳನ್ನು ಸಮಾಪನಗೊಳಿಸಲು ಅನುಕೂಲವಾಗುವಂತೆ ಆಯೋಗದ ಅವಧಿಯನ್ನು ದಿನಾಂಕ 30ನೇ ಏಪ್ರಿಲ್ 2007ರವರೆಗೆ ವಿಸ್ತರಿಸಲಾಗಿದೆ. ಆಯೋಗವು ತನ್ನ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಧ್ಯದಲ್ಲೇ ಸಲ್ಲಿಸುವ ನೀರಿಕ್ಷೆ ಇದೆ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

19 (1) ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) The Number of proposals received for setting up of, New Industries in Gulbarga District since 2004 to till date (details be furnished) ;